ಶ್ರೀ ಕೆ.ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಿಗೆ in time ನಲ್ಲಿ ಊಟ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ಪುನಃ 2.30ಗಂಟೆಗೆ ಸೇರೋಣ.

(ಸಭೆಯನ್ನು ಮಧ್ಯಾಹ್ನ 1 ಗಂಟೆ 42 ನಿಮಿಷಕ್ಕೆ ಮುಂದೂಡಲಾಯಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 53 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

ಶ್ರೀ ಗೋವಿಂದ ಎಂ.ಕಾರಜೋಳ :– ಮಾನ್ಯ ಸಭಾಧ್ಯಕ್ಷರೆ, ಮುಂದಿನ ಎಲ್ಲಾ ಚೇರ್‌ಗಳೂ ಖಾಲಿ ಇವೆ. ಮಂತ್ರಿಗಳಿಲ್ಲ, ಮುಖ್ಯಮಂತ್ರಿಗಳಿಲ್ಲ, ಸೀನಿಯರ್ ಮಂತ್ರಿಗಳಿಲ್ಲ, ಕಾನೂನು ಮಂತ್ರಿಗಳಿಲ್ಲ. ಮತ್ತೆ ಸದನವನ್ನು ಹೇಗೆ ನಡೆಸುವುದು?

(ಗೊಂದಲ)

ಅಧ್ಯಕ್ಷರು : ಬಸವರಾಜ ರಾಯರೆಡ್ಡಿ . . . . .

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನೀವು ಎಚ್ಚರಿಕೆ ಕೊಟ್ಟ ಮೇಲೂ ಯಾರೂ ಚೇರ್‌ನಲ್ಲಿ ಇಲ್ಲವೆಂದರೆ . . . .

(ಗೊಂದಲ)

ಅಧ್ಯಕ್ಷರು : ಕಾನೂನು ಮಂತ್ರಿಗಳು ಬಂದೇ ಬಿಟ್ಟರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನಿನ್ನೆ ಮಧ್ಯಾಹ್ನ, ಇವತ್ತು ಬೆಳಗ್ಗೆ ಮತ್ತೆ ಈಗ ಯಾರೂ ಚೇರ್‌ನಲ್ಲಿ ಇಲ್ಲ . . . .

(ಗೊಂದಲ)

ಅಧ್ಯಕ್ಷರು : ಬರುತ್ತಾರೆ.

ಶ್ರೀ ಸಿ.ಟಿ.ರವಿ : ಪದೇ ಪದೇ ಹೀಗೆ ಖಾಲಿ ಆಗಿರುವುದನ್ನು ನೋಡಿದರೆ ಇದರಲ್ಲಿ ಒಳಮರ್ಮ ಏನೋ ಇದೆ ಎನ್ನುವುದನ್ನು ತೋರಿಸುತ್ತದೆ.

(ಗೊಂದಲ)

ಅಧ್ಯಕ್ಷರು : Take note of this.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ, ಎಲ್ಲರೂ ಒಟ್ಟಿಗೆ ಮಾತನಾಡಿದರೆ ಏನು ಪ್ರಯೋಜನ?

ಶ್ರೀ ಗೋವಿಂದ ಎಂ.ಕಾರಜೋಳ : ಅವರು ಈ ಕಡೆ ಇದ್ದಾಗ ಎಲ್ಲಾ ಚೇರ್ ಖಾಲಿ ಇರುತ್ತಿತ್ತು.

ಶ್ರೀ ಸಿ.ಟಿ.ರವಿ : ಪದೇ ಪದೇ ತಮ್ಮ ಮಾತಿಗೆ ಹೀಗೆ ಅಗೌರವ ತೋರಿಸುತ್ತಿದ್ದಾರೆಂದರೆ ಒಳ ಮರ್ಮ ಏನೋ ಇದೆ ಎಂದು ತೋರಿಸುತ್ತದೆ.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಸಭಾಧ್ಯಕ್ಷರೆ, ನಮ್ಮ ವಿನಂತಿ ಇದೆ. ಸೀನಿಯರ್ ಮಿನಿಸ್ಟರ್ಸ್ ಇಲ್ಲ . . . .

ಅಧ್ಯಕ್ಷರು : ಹೇಳುತ್ತಾರೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಒಳ ಮರ್ಮ ಏನೂ ಇಲ್ಲ. ನೀವು ಎಷ್ಟು ಪ್ರಭಾವಿಗಳಾಗಿದ್ದೀರೆಂದರೆ ಅವರು ಇನ್ನೂ ಮಾನಸಿಕವಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನಿಮ್ಮ ಭಯಕ್ಕೆ ಹಾಗೆ ಆಗಿದೆ. ಈಗ ನಿಧಾನವಾಗಿ ಬಂದು ಕುಳಿತುಕೊಳ್ಳುತ್ತಾರೆ, settle ಆಗುತ್ತಾರೆ.

ಶ್ರೀ ಗೋವಿಂದ ಎಂ.ಕಾರಜೋಳ : ಆಕಸ್ಮಿಕವಾಗಿ ಆ ಕಡೆ ಕುಳಿತಿದ್ದಾರೆಯೇ ಅಂತಾನಾ?

ಶ್ರೀ ಕೆ.ಆರ್.ರಮೇಶ್ ಕುಮಾರ್ : ನಿಮ್ಮ ಪ್ರಭಾವ, ಮೊದಲನೇ ಸಾಲಿನಲ್ಲಿ ಎಷ್ಟಿತ್ತು ಎನ್ನುವುದು . . . .

ಅಧ್ಯಕ್ಷರು : ಎರಡೂ ಜನ ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಸಭಾಧ್ಯಕ್ಷರೆ, ನನ್ನದು ಒಂದೇ ಒಂದು ವಿನಂತಿ. ಅಧಿವೇಶನ ನಡೆಯುವುದು ನಾಳೆ, ನಾಡಿದ್ದು ಎರಡು ದಿನ. ನಿನ್ನೆಯಿಂದ ನಿಜವಾದ ಕಾರ್ಯಕಲಾಪಗಳು ಪ್ರಾರಂಭವಾಗಿರುವುದು ತಮಗೆಲ್ಲಾ ಗೊತ್ತಿದೆ. ನಿನ್ನೆ ಬೆಳಿಗ್ಗೆಯಿಂದ ಇದೇ ರೀತಿಯಾದಂಥ ಸನ್ನಿವೇಶವನ್ನು ನಾವು ಎದುರಿಸುತ್ತಿದ್ದೇವೆ. ತಮಗೂ ಬಹಳ ಇಕ್ಕಟ್ಟು, ಮುಜುಗರವನ್ನು ಆಡಳಿತ ಪಕ್ಷದವರು ಉಂಟು ಮಾಡುತ್ತಿದ್ದಾರೆ. ತಾವು ಮೊದಲನೇ ದಿನದಿಂದಲೇ ಈ ಸದನವನ್ನು ಚೆನ್ನಾಗಿ ನಡೆಸಬೇಕು ಎನ್ನುವ ಸಂಕಲ್ಪದಿಂದ ಅಲ್ಲಿ ಇದ್ದೀರಿ. ಆದರೆ, ಅದಕ್ಕೆ ಪೂರಕವಾದ ಸಹಕಾರ ಆಡಳಿತ ಪಕ್ಷದಿಂದ ಸಿಗುತ್ತಿಲ್ಲವೆಂದರೆ . . .

ಅಧ್ಯಕ್ಷರು : ಇದೆ. ಸಹಕಾರ ಬರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ತಾವಾದರೂ ಒಳ್ಳೆಯ ರೀತಿಯಲ್ಲಿ ಸದನವನ್ನು ನಡೆಸುವುದು ಹೇಗೆ? ಆದರೆ, ಅವರಿಗೆ ಎಚ್ಚರಿಕೆ ಕೊಡಬೇಕು. ಸದನವನ್ನು ಮುಂದಕ್ಕೆ ಹಾಕಿ. ಇವರು ಈ ರೀತಿ ಇದ್ದಾರೆ ಎನ್ನುವುದು ರಾಜ್ಯದ ಜನತೆಗೂ ಗೊತ್ತಾಗಲಿ . . . .

ಅಧ್ಯಕ್ಷರು : ಆಯಿತು, ರಾಯರೆಡ್ಡಿ ನೀವು ಮುಂದುವರೆಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಮೂಲಕ ಆದರೂ ಜನತೆಗೆ ತಿಳಿಯಲಿ.

ಅಧ್ಯಕ್ಷರು : ಆಯಿತು, ತಾವು ಸರ್ಕಾರದ ಗಮನ ಸೆಳೆದಿದ್ದೀರಿ. ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಂಡಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ವಿರೋಧ ಪಕ್ಷದಲ್ಲಿ ಕುಳಿತು ಕುಳಿತು ಇನ್ನೂ ಆಡಳಿತ ಪಕ್ಷಕ್ಕೆ ಹೋಗಿದ್ದೇವೆನ್ನುವುದು confusion ಆಗಿರಬಹುದೆಂದು ಕಾಣಿಸುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ: ಕಾರಜೋಳರವರೇ, ಇನ್ನು mind-set change ಆಗಬೇಕು. ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ನೀವು ಮಾತನಾಡಿ.

ಶ್ರೀ ಗೋವಿಂದ ಎಂ.ಕಾರಜೋಳ : ನಾವು mind-set change ಆಗಿ, ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿ ಎಂದು ಹೇಳುತ್ತಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ಮತ್ತೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಧ್ಯಕ್ಷರೆ, ಈಗ ನೀರಾವರಿ ವಿಚಾರವನ್ನು ಈಗಾಗಲೇ ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಬಹಳ ಸಂತೋಷವಾದ ವಿಚಾರ. ಇವತ್ತು ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ತನ್ನ ಯೋಜನಾ ವೆಚ್ಚದಲ್ಲಿಟ್ಟು, ನೀರಾವರಿ ಯೋಜನೆಯನ್ನು ಅದರಲ್ಲೂ ವಿಶೇಷವಾಗಿ ಕೃಷ್ಣಾ–ಬಿ ಸ್ಕೀಂನ್ನು 5 ವರ್ಷದಲ್ಲಿ ಕಾಲಬದ್ಧತೆಯಿಂದ ಪೂರ್ತಿಗೊಳಿಸುತ್ತೇವೆ ಎನ್ನುವ ಮಾತನ್ನು ಹೇಳಿರುವುದಕ್ಕೆ ನಿಜವಾಗಿಯೂ ಕೂಡಾ ನಾನು ಈ ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಕೆಲಸವನ್ನು ತ್ವರಿತವಾಗಿ ಮಾಡುವುದಕ್ಕೆ ಮುಂದಿನ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಇಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಇದಾದ ನಂತರ, ಮಾನ್ಯ ಅಧ್ಯಕ್ಷರೆ, ಪ್ಯಾರಾ 29ರಲ್ಲಿ ಸನ್ಮಾನ್ಯ ರಾಜ್ಯಪಾಲರು ಈ ಸರ್ಕಾರದ ವಿಚಾರಗಳನ್ನು ವಿದ್ಯುತ್ ವಲಯಕ್ಕೆ ಸಂಬಂಧಿಸಿದಂತೆ ಹೇಳಿದ್ದಾರೆ.